ದಿನಾಂಕಃ 25.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಎಂ.ಎಸ್.ಜಿ. ವಕೀಲರಿಂದ:**

ನಾನು ಮೂಲತಃ ದೇವವೃಂದ ಗ್ರಾಮದ ವಾಸಿ ಎಂದರೆ ಸರಿ. ದಾವಾ ಐಟಂ.ನಂ.4 ರಿಂದ 11 ರ ಸ್ವತ್ತುಗಳು ನನಗೆ ನಮ್ಮ ಕುಟುಂಬದಲ್ಲಿ ಆದ 1999 ರಲ್ಲಿನ ನೋಂದಾಯಿತ ವಿಭಾಗಪತ್ರದ ಮೂಲಕ ಬಂದಿತ್ತು ಎಂದರೆ ಸರಿ. ಸದರಿ ಸ್ವತ್ತುಗಳನ್ನು 4 ನೇ ಪ್ರತಿವಾದಿಯ ತಂದೆಗೆ ಮಾರಾಟ ಮಾಡುತ್ತೇನೆ ಎಂದು ಒಪ್ಪಿ ಕರಾರು ಪತ್ರ ಮಾಡಿಕೊಟ್ಟಿದ್ದೆ ಎಂದರೆ ಸರಿ. ಆ ಕರಾರು ಪತ್ರವನ್ನು 2010 ನೇ ಇಸವಿಯಲ್ಲಿ ಮಾಡಿಕೊಟ್ಟಿದ್ದೆ. ಸದರಿ ಕರಾರು ಪತ್ರದಡಿ ರೂ.5 ಲಕ್ಷ ಹಣವನ್ನು ಮುಂಗಡವಾಗಿ ಪಡೆದುಕೊಂಡಿದ್ದೆ. ಸದರಿ ಸ್ವತ್ತುಗಳಿಗೆ ಸಂಬಂಧಪಟ್ಟಂತೆ 4 ನೇ ಪ್ರತಿವಾದಿಯ ಹೆಸರಿಗೆ ನೋಂದಾಯಿತ ಕ್ರಯಪತ್ರ ಮಾಡಿಕೊಟ್ಟಿದ್ದೇನೆ ಎಂದರೆ ಸರಿ. ಸದರಿ ಕ್ರಯಪತ್ರದನ್ವಯ ಕ್ರಯದ ಪ್ರತಿಫಲ ಎಷ್ಟು ಬಂದಿತ್ತು ಎಂದು ನನಗೆ ಮಾಹಿತಿ ಇಲ್ಲ. ಆ ಕ್ರಯಪತ್ರ ಮಾಡಿಕೊಡುವ ಕಾಲಕ್ಕೆ ವಾದಿಗಳು ಮೈನರ್ ಆಗಿದ್ದರು ಎಂದರೆ ಸರಿ. ಸದರಿ ಕ್ರಯಪತ್ರದಡಿ ರೂ.18,20,000/- ಕ್ರಯದ ಪ್ರತಿಫಲ ಪಡೆದುಕೊಂಡಿದ್ದೇನೆ ಎಂದರೆ ಸರಿ. ದಾವ ಐಟಂ.ನಂ.4 ರಿಂದ 11 ರ ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಸ್ವತ್ತುಗಳಾಗಿದ್ದವು ಎಂದರೆ ಸರಿ.

4 ನೇ ಪ್ರತಿವಾದಿಯಿಂದ ಕ್ರಯದ ಪ್ರತಿಫಲವಾಗಿ ಪಡೆದುಕೊಂಡಿದ್ದ ರೂ.18,20,000/- ಹಣದಿಂದ ದಾವ ಐಟಂ.ನಂ.1 ರಿಂದ 3 ರ ಸ್ವತ್ತುಗಳನ್ನು ಖರೀದಿಸಿದ್ದೆ ಎಂದರೆ ಸರಿ. ಸದರಿ ಜಮೀನುಗಳನ್ನು ರಾಮಭಟ್ಟ ಎನ್ನುವವರಿಂದ ಖರೀದಿಸಿದ್ದೇನೆ. ಈ ವಿಚಾರವನ್ನು ನಾನು 3 ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ಕ್ರಯಪತ್ರದಲ್ಲಿ ನಮೂದಿಸಿದ್ದೇನೆ. ದಾವ ಐಟಂ.ನಂ.1 ರಿಂದ 3 ರ ಸ್ವತ್ತುಗಳನ್ನು ಯಾರಿಂದ ಹಾಗೂ ಯಾವ ಹಣದಿಂದ ಖರೀದಿಸಿದ್ದೇನೆ ಎಂದು ನನ್ನ ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರ ಮತ್ತು ಸಾಕ್ಷ್ಯಪ್ರಮಾಣಪತ್ರವನ್ನು ತಯಾರಿಸಲು ನಾನೇ ಮಾಹಿತಿ ಕೊಟ್ಟಿದ್ದೆ. ದಾವ ಐಟಂ.ನಂ.4 ರಿಂದ 11 ರ ಸ್ವತ್ತುಗಳ ಮೇಲೆ ವಾದಿಗಳಿಗೂ ಸಹಾ ಸಮಾನವಾದ ಹಕ್ಕು ಇತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಪಿ.ಯು.ಸಿ ವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು 'ಆರಂಭ' ಎನ್ನುವ ಹೆಸರಿನ ಪತ್ರಿಕೆ ನಡೆಸುತ್ತಿದ್ದೇನೆ ಎಂದರೆ ಸರಿ. ದಾವ ಐಟಂ.ನಂ.4 ರಿಂದ 11 ರ ಸ್ವತ್ತುಗಳನ್ನು ಮಾರಾಟ ಮಾಡಿದ ಬಾಬ್ತು ಬಂದ ಹಣದಿಂದ ದಾವ ಐಟಂ.ನಂ.1 ರಿಂದ 3 ರ ಸ್ವತ್ತುಗಳನ್ನು ಖರೀದಿಸಿದ್ದ ಕಾರಣ ಸದರಿ ದಾವ ಐಟಂ.ನಂ.1 ರಿಂದ 3 ರ ಸ್ವತ್ತುಗಳ ಮೇಲೆ ವಾದಿಯರಿಗೂ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ.

2 ನೇ ಪ್ರತಿವಾದಿಯ ಹೆಸರಿಗೆ 4 ಎಕರೆ 38 ಗುಂಟೆ ಜಮೀನು ಖರೀದಿ ಮಾಡಿದ್ದೇನೆ ಎಂದು ಹೇಳಿಕೊಂಡಿರುವ ಬಾಬ್ತು ಸದರಿ ಜಮೀನಿನ ಸ.ನಂ. ನ್ನು ನನ್ನ ಸಾಕ್ಷ್ಯಪ್ರಮಾಣಪತ್ರದಲ್ಲಿ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ನಾನು, 2 ನೇ ಪ್ರತಿವಾದಿ ಮತ್ತು ವಾದಿಗಳು ಒಟ್ಟಿಗೆ ಖರೀದಿ ಮಾಡಿದ್ದೇವೆಂದು ಹೇಳಿಕೊಂಡಿದ್ದೇನೆ ಎಂದರೆ ಸರಿ. ಈ ಸಂಬಂಧ ಕ್ರಯಪತ್ರವನ್ನು ಹಾಜರುಪಡಿಸಲಾಗಿದೆಯ ಎಂದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿದ ಬಾಬ್ತು ನಾನು, ವಾದಿಗಳು ಮತ್ತು 2 ನೇ ಪ್ರತಿವಾದಿ ಸಂಪೂರ್ಣ ಹಣ ಪಡೆದಿದ್ದೇವೆ ಎಂದು ಸಾಕ್ಷ್ಯ

ಪ್ರಮಾಣಪತ್ರದಲ್ಲಿ ಹೇಳಿಕೊಂಡಿದ್ದೇನೆ ಎಂದರೆ ಸರಿ. ನನಗೆ ಬ್ಯಾಂಕ್ ಗಳಲ್ಲಿ ಸಾಲ ಇದ್ದ ಬಗ್ಗೆ ಹಾಗೂ ಅದನ್ನು ತೀರುವಳಿ ಮಾಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. 4 ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ಕ್ರಯಪತ್ರದಲ್ಲಿ ಕ್ರಯದ ಪ್ರತಿಫಲವನ್ನು ಮೈನರ್ ಮಕ್ಕಳ ಪರವಾಗಿಯೂ ಸಹಾ ಪಡೆಯಲಾಗಿದೆ ಎಂದು ನಮೂದಿಸಲಾಗಿದೆ. ದಾವ ಐಟಂ.ನಂ.1 ರಿಂದ 3 ರ ಸ್ವತ್ತುಗಳನ್ನು ನಾನು 3 ನೇ ಪ್ರತಿವಾದಿಗೆ ಮಾರಾಟ ಮಾಡುವಾಗಲೂ ಸಹಾ ವಾದಿಯರು ಮೈನರ್ ಆಗಿದ್ದರು ಎಂದರೆ ಸರಿ. ದಾವ ಜಮೀನುಗಳನ್ನು ಮಾರಾಟ ಮಾಡುವ ಕಾಲಕ್ಕೆ ವಾದಿಯರ ಪರವಾಗಿ ನ್ಯಾಯಾಲಯದಿಂದ ಅನುಮತಿ ಪಡೆದು ಕ್ರಯಪತ್ರ ಮಾಡಿಕೊಟ್ಟಿಲ್ಲ.

ಮೈನರ್ ಗಳಿಗೆ ಸಂಬಂಧಪಟ್ಟ ಜಮೀನನ್ನು ಮಾರಾಟ ಮಾಡಬೇಕಾದರೆ ನ್ಯಾಯಾಲಯದ ಅನುಮತಿ ಪಡೆಯಬೇಕು ಎನ್ನುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ನಾನೊಬ್ಬನೆ ಕ್ರಯಪತ್ರ ಬರೆದುಕೊಟ್ಟಿದ್ದೇನೆ. ಸಾಕ್ಷಿಯು ಸ್ವತಃ ಆ ಸಮಯಕ್ಕೆ 2 ನೇ ಪ್ರತಿವಾದಿಯಿಂದ ಅನುಮತಿ ಪಡೆದಿದ್ದೆ ಎಂದು ನುಡಿಯುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ನಾನು ಸಂಪೂರ್ಣ ಓದಿದ್ದೇನೆ. ನಾನು ಮತ್ತು 2 ನೇ ಪ್ರತಿವಾದಿ ಸೇರಿ 3 ನೇ ಪ್ರತಿವಾದಿಗೆ ಕ್ರಯಪತ್ರ ಬರೆದುಕೊಟ್ಟಿದ್ದೇನೆ ಎಂದು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆಸಲಾಗಿದೆಯಾ ಎಂದು ನನಗೆ ನೆನಪಿಲ್ಲ. ತಾಲ್ಲೂಕು ಕಚೇರಿಯಲ್ಲಿ ಮಾತುಕತೆಯಾದಾಗ ನಾನು ಮತ್ತು 2 ನೇ ಪ್ರತಿವಾದಿ ಮಾತ್ರ ಇದ್ದೆವು. ಆ ಸಮಯಕ್ಕೆ ವಾದಿಯರನ್ನು ಕರೆಸಿಕೊಳ್ಳಲು ತೊಂದರೆ ಇರಲಿಲ್ಲ. ದಾವ ಜಮೀನುಗಳನ್ನು ಮಾರಾಟ ಮಾಡುತ್ತಿದ್ದೇವೆ ಎಂದು ವಾದಿಯರಿಗೆ ತಿಳಿಸಿದ್ದೆವು. ಈ ರೀತಿ ದಾವ ಐಟಂ.ನಂ.1 ರಿಂದ 3 ರ ಸ್ವತ್ತುಗಳನ್ನು ಮಾರಾಟ ಮಾಡುವ ಕಾಲಕ್ಕೆ ತಿಳಿಸಿದ್ದೆ. ಆ ಸಮಯಕ್ಕೆ ನಾನು, ವಾದಿಯರು ಮತ್ತು 2 ನೇ ಪ್ರತಿವಾದಿ ಒಟ್ಟಿಗೆ ಇದ್ದೆವು.

ನಾನು 2 ನೇ ಪ್ರತಿವಾದಿಗೆ ರೂ.25,00,000/- ಹಣ ಕೊಟ್ಟಿದ್ದೇನೆ ಎನ್ನುವ ಸಂಬಂಧ ದಾಖಲೆಯನ್ನು ಹಾಜರುಪಡಿಸಿಲ್ಲ. ಜಮೀನು ಮಾರಾಟದಿಂದ ಬಂದ ಹಣದ ಪೈಕಿ ಮೇಲೆ ಹೇಳಿದಷ್ಟು ಹಣವನ್ನು 2 ನೇ ಪ್ರತಿವಾದಿಗೆ ಕೊಟ್ಟಿದ್ದೇನೆ. ನಾನು ಹೇಳಿರುವಂತೆ 2 ನೇ ಪ್ರತಿವಾದಿಗೆ ಯಾವುದೇ ಹಣ ಕೊಡದೇ ಇರುವ ಕಾರಣ ನನ್ನ ಬಳಿ ದಾಖಲೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಯಾವ ದಿನಾಂಕದಂದು 2 ನೇ ಪ್ರತಿವಾದಿಗೆ ಹಣ ಕೊಟ್ಟಿದ್ದೇನೆ ಎಂದು ನನಗೆ ನೆನಪಿಲ್ಲ. ವಾದಿಯರ ಹಕ್ಕಿಗೆ ಮೋಸ ಮಾಡಿ ದಾವ ಐಟಂ.ನಂ.1 ರಿಂದ 3 ರ ಜಮೀನುಗಳನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಜಮೀನುಗಳನ್ನು ನಾನೊಬ್ಬನೆ ಮಾರಾಟ ಮಾಡಲು ನನಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಎಷ್ಟು ಮೊತ್ತಕ್ಕೆ ಜಮೀನು ಮಾರಾಟ ಮಾಡಿದ್ದೆ ಎಂದು ನನಗೆ ನೆನಪಿಲ್ಲ. 3 ನೇ ಪ್ರತಿವಾದಿಯಿಂದ ಕ್ರಯದ ಪ್ರತಿಫಲವಾಗಿ ರೂ.72,00,000/- ಹಣ ಪಡೆದಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ಕ್ರಯಪತ್ರದಲ್ಲಿ ಕ್ರಯದ ಪ್ರತಿಫಲವನ್ನು ರೂ.24,70,000/- ಎಂದು ತೋರಿಸಲಾಗಿದೆ ಎಂದರೆ ಇರಬಹುದು. ವಾದಿಯರಿಗೆ ದಾವ ಜಮೀನುಗಳ ಮೇಲಿರುವ ಹಕ್ಕನ್ನು ತಪ್ಪಿಸಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರ ಮತ್ತು ಪ್ರತಿವಾದ ಪತ್ರದಲ್ಲಿ ಸುಳ್ಳು ಪ್ರತಿಪಾಧನೆ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಇತರೆ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಉಭಯ ಪಕ್ಷಕಾರರ ವಾದ ಮತ್ತು ಪ್ರಸ್ತುತ ಸಾಕ್ಷಿಯ ಹೇಳಿಕೆಗಳನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸುತ್ತಾ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.